# ಆಹಾ ಸುದ್ದಿ!

★ ಸಸಿತೋಟ



ವಿಯೆಟ್ನಾಮಿನ ಹನೋಯಿಯಲ್ಲಿ ತೀಕ್ಷ್ಣ ವಿಷವುಳ್ಳ ಕಟ್ಟು ಹಾವುಗಳನ್ನು ಒಣ ಹಾಕಲಾಗುತ್ತದೆ. ಇದನ್ನೇನು ಸಂಡಿಗೆ ಮಾಡುತ್ತಾರಾ? ಇಲ್ಲ, ಅಮೂಲ್ಯವಾದ ವೈನ್ ತಯಾರಿಕೆಯಲ್ಲಿ ಬಳಸುತ್ತಾರಂತೆ. ಇನ್ನು ಮುಂದೆ 'ಮತ್ತೇರಿದೆ' ಎನ್ನುವ ಬದಲು 'ವಿಷವೇರಿದೆ' ಎಂದು ಹಾಡಿನಲ್ಲಿ ಸೇರಿಸಬಹುದು.

ಡೇಲ್ ಇರ್ಬಿ ಡಲ್ಲಾಸ್‌ನ ಶಾಲೆಯಲ್ಲಿ 40 ವರ್ಷಗಳ ಕಾಲ ಶಿಕ್ಷಕನಾಗಿ ಕೆಲಸ ಮಾಡಿದ. ಶಾಲೆಯ 40 ವರ್ಷಗಳ ಸ್ಮರಣ ಸಂಚಿಕೆಗಳಲ್ಲಿರುವ ಚಿತ್ರಗಳಲ್ಲೂ ಅದೇ ಷರ್ಟ್, ಅದೇ ಸ್ವೆಟರ್. ವೃತ್ತಿ ಆರಂಭಿಸಿದ ಎರಡನೇ ವರ್ಷ ಆಕಸ್ಮಿಕವಾಗಿ ರಿಪೀಟ್ ಆದ ಈ ಉಡುಪಿನಿಂದ ಇರ್ಬಿ ಮುಜುಗರಗೊಂಡನಂತೆ. ಆದರೆ ಇರ್ಬಿಯ ಪತ್ನಿ ಜಾಣೆ. ಮತ್ತೆ ಮತ್ತೆ ಅದೇ ಉಡುಪನ್ನು ತೊಡುವಂತೆ ಮಾಡಿ ದಾಖಲೆ ಮಾಡಿಸಿಬಿಟ್ಟಳು. ಜಾಣ ಹೆಂಡತಿ ಇದ್ದರೆ, ತಪ್ಪು ಕೂಡಾ ಒಪ್ಪು ಅನ್ನುವಂತಾಗಿಬಿಡುತ್ತದೆ.



ಉಕ್ರೇನಿನಲ್ಲಿ 40 ವರ್ಷಗಳಷ್ಟು ಹಳೆಯದಾದ ಹೊರಾಂಗಣ ಜಿಮ್ನಾಶಿಯಂ. ಗುಜರಿ ಕಬ್ಬಿಣದ ವಸ್ತುಗಳನ್ನು ಬಳಸಿ ಮಾಡಿರುವ ಜಿಮ್ ಎಷ್ಟು ಜನಪ್ರಿಯ ಎಂದರೆ ಜನ ಕ್ಯೂನಲ್ಲಿ ನಿಂತು ವ್ಯಾಯಾಮ ಮಾಡುತ್ತಾರಂತೆ. ಬೆಂಗಳೂರಿನಲ್ಲೂ ಒಂದೆರಡು ಸಾರ್ವಜನಿಕ ಉದ್ಯಾನಗಳಲ್ಲಿ ಅತ್ಯಾಧುನಿಕ ಜಿಮ್ ಮಷಿನ್‌ಗಳು ಬಂದು ಕೂತಿವೆ. ಆದರೆ ಉಕ್ರೇನಿನ ಮಷಿನ್‌ಗಳು 40 ವರ್ಷಗಳಿಂದ ಯಾವುದೇ ಭದ್ರತೆ ಇಲ್ಲದೇ ಅಲ್ಲೇ ಉಳಿದಿವೆಯೆಂದರೆ...! ಬೆಂಗಳೂರಿಗರ ಜೊತೆ ಪೈಪೋಟಿ ನಡೆಸುವ ಹಾಗಿಲ್ಲ ಬಿಡಿ.



ಜರ್ಮನಿಯ ಷಾಂಟೆನ್‌ನಲ್ಲಿ ಇತ್ತೀಚೆಗೆ ಪಂದ್ಯಾಟಗಳು ನಡೆದವು. ಸ್ಪರ್ಧೆಗಳಲ್ಲಿ ಮರದ ಕಾಂಡವನ್ನು ಎತ್ತಿಕೊಂಡು ಓಡುವ ಸ್ಪರ್ಧೆ ಕೂಡಾ ಇತ್ತು. ನಮ್ಮಲ್ಲೂ ಇದೆಯಲ್ಲ, ಕಾಂಡದ ಬದಲು ದಾಂಡು ಎತ್ತಿಕೊಂಡು ಓಡುವ ಆಟ!

ವಿಂಬಲ್ಡನ್ ಟೆನ್ನಿಸ್ ಎಂದರೆ ಎಲ್ಲವೂ ಬಿಳಿ ಬಿಳಿ. ಬಣ್ಣಕ್ಕೆ ಎಂಟ್ರಿ ಇಲ್ಲ. ಕಿತ್ತಳೆ ಬಣ್ಣದ ಶೂ ಧರಿಸಿದ್ದ ರೋಜರ್ ಫೆಡರರ್‌ನಿಂದಾಗಿ ಟೂರ್ನಿ ಸಂಘಟಕರ ಮುಖ ಕೆಂಪಾಗಿ ಬಿಳಿ ಶೂ ಧರಿಸುವಂತೆ ಆತನಿಗೆ ಎಚ್ಚರಿಕೆ ನೀಡಿದರಂತೆ. ಆದರೆ ಬಣ್ಣದ ಒಳಬಟ್ಟೆ ಧರಿಸಿದ್ದ ರಷ್ಯಾದ ಮಾರಿಯಾ ಶೆರಪೋವಾ ಮತ್ತು ಅಮೆರಿಕಾದ ವೀನಸ್ ವಿಲಿಯಮ್ಸ್‌ಗೆ ಮಾತ್ರ ಈ ಎಚ್ಚರಿಕೆ ಘಂಟೆಯ ಸದ್ದು ಮಾಡಿದವರಿಲ್ಲ. ಬಾಲ್ ಸರ್ವ್ ಮಾಡುವಾಗ ಈ ಬಣ್ಣ ಮುಖಕ್ಕೆ ರಾಚಿದರೂ ಸಂಘಟಕರು ತೆಪ್ಪಗೆ ಇದ್ದರಂತೆ. 'ಸಾಫ್ಟ್ ಕಾರ್ನರ್' ಎಲ್ಲೆಡೆಯೂ ಇದೆ ಅಂತಾಯ್ತು.

2009ರ ಫ್ರೆಂಚ್ ಫುಟ್ಬಾಲ್‌ನ ವಿವಾದದ ಕೇಂದ್ರಬಿಂದುವಾಗಿದ್ದ ವಿನ್ಯಾಸಗಾರ್ತಿ ಝಾಹಿಯಾ ಡೆಹರ್ ಪ್ಯಾರಿಸ್‌ನಲ್ಲಿ ತೆರೆದ ಮಳಿಗೆಯ ವಿಂಡೋ ಅಲಂಕಾರವಿದು. ವಿಂಡೋ ಪ್ರದರ್ಶನವೇ ಹೀಗಿದ್ದರೆ, ಒಳಗಿನ್ನೇನು ಇರಬಹುದು ಎಂಬ ಕುತೂಹಲದಿಂದಲೇ ಗಿರಾಕಿಗಳು ಎಂಟ್ರಿ ಕೊಡಬಹುದು. ಅಷ್ಟಕ್ಕೂ ಉದ್ಘಾಟನೆಗೆ ಡೆಹರ್ ಬಂದಿದ್ದೂ ಹೀಗೇನೆ. ಪ್ರತ್ಯಕ್ಷ ನೋಟ ಮಿಸ್ ಮಾಡಿಕೊಂಡವರು ಅಂತರ್ಜಾಲದಲ್ಲಿ ಈಗ ತಡಕಾಡುತ್ತಿದ್ದಾರಂತೆ.

